ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ವಾಹನ ಸಂಖ್ಯೆ ಕೆಎ-42-ಎ-1830 ನನಗೆ ಸೇರಿದ್ದು. ಆ ದಿನ ನಾನು ರಾಮನಗರದಿಂದ ಬೆಂಗಳಗೂರಿಗೆ ಹೋಗುತ್ತಿದ್ದೇನು. ನನ್ನ ವಾಹನದ ಹಿಂದೆ ಕೆಎ-55-7161 ಕಾರು ಬರುತ್ತಿತ್ತು ಎಂದರೆ ಸರಿ. ನನ್ನ ವಾಹನದ ಮುಂದೆ ಬಸ್ ಸಂಖ್ಯೆ ಕೆಎ-42-8387 ಹೋಗುತ್ತಿತ್ತು ಎಂದರೆ ಸರಿ. ನನ್ನ ವಾಹನ ಕಾರು ಮತ್ತು ಬಸ್ ನ ಮಧ್ಯೆ ಇತ್ತು ಎಂದರೆ ಸರಿಯಲ್ಲ. ನಾನು ಇದ್ದಕ್ಕಿದ್ದ ಹಾಗೆ ಬ್ರೇಕ್ ಹಾಕಿದ ಕಾರಣ ನನ್ನ ಗಾಡಿ ಪಲ್ಟಿ ಹೊಡೆದು ಹಿಂಬದಿಯಲ್ಲಿ ಬರುತ್ತಿದ್ದ ವಾಹನವು ನನ್ನ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ಮುಂದೆ ಹೋಗುತ್ತಿದ್ದ ಬಸ್ ಚಾಲಕನ ಅಜಾಗರುಕಾತೆಯಿಂದ ಅಪಘಾತ ಆಗಿಲ್ಲ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ರಿಯಲ್ಲ.

ನನ್ನ ವಾಹನಕ್ಕೆ ಓರಿಯಂಟಲ್ ವಿಮೆ ಇತ್ತು ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಯುನೈಟ್ ವಿಮೆ ಇತ್ತು. ಆ ವಿಮಾ ಪಾಲಿಸಿಯು ತರ್ಡ್ ಪಾರ್ಟಿ ಕವರ್ ಆಗುತ್ತದೆ ಎಂದರೆ ಸರಿ. ವಾಹನಕ್ಕೆ ಆದ ಡ್ಯಾಮೇಜ್ ಅನ್ನು ನಾನು ಕ್ಲೇಮು ಮಾಡಿಕೊಂಡಿರುತ್ತೇನೆ ಎಂದರೆ ಸರಿ, ಆದರೆ ಇಎಂವಿ ಇದ್ದ ಕಾರಣ ಕೇವಲ 85 ಸಾವಿರ ಮಾತ್ರ ಕೊಟ್ಟಿರುತ್ತಾರೆ. ನಾನು ಎಷ್ಟು ಕ್ಲೇಮು ಮಾಡಿಕೊಂಡಿರುತ್ತೇನೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಪರಿಹಾರ ಹಣ ಪಡೆಯುವ ಉದ್ದೇಶದಿಂದ ನಾನು ವಿಚಾರಗಳನ್ನು ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಪರಿಹಾರ ತೆಗೆದುಕೊಂಡಿರುವ ಕಾರಣ

ಇನ್ನೊಮ್ಮೆ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ವಾಹನವನ್ನು ಸುಮಾರು 1 ರಿಂದ 2 ತಿಂಗಳ ಕಾಲ ರಿಪೇರಿಗೆ ಬಿಟ್ಟಿದ್ದೆ. ನನ್ನ ವಾಹನ ಒಂದು ವರ್ಷಗಳ ಕಲಾ ಗ್ಯಾರೇಜ್ ನಲ್ಲಿ ಇತ್ತು. ನನ್ನ ವಾಹನ ಒಂದು ವರ್ಷ ಕಾಲ ಗ್ಯಾರೇಜ್ ನಲ್ಲಿ ಇತ್ತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಾನು ಆ ರೀತಿ ದಾಖಲೆ ಕೊಟ್ಟಿಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಅಪಘಾತವಾದ ಬಗ್ಗೆ ನನ್ನ ವಿಮಾ ಕಂಪನಿಯವರಿಗೆ ವಿಚಾರ ತಿಳಿಸಿದ್ದೇನೆ. ವಿಮಾ ಕಂಪನಿಯವರು ಬಂದು ಸರ್ವೇ ಮಾಡಿದ್ದಾರೆ ಎಂದರೆ ಸರಿ. ಸದರಿ ಸರ್ವೇ ವರದಿಯನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಏನು ಮತ್ತು ಎಷ್ಟು ಡ್ಯಾಮೇಜ್ ಆಗಿದೆ ಎಂದು ಗ್ಯಾರೇಜ್ ನವರು ನಮೂದಿಸಿರುತ್ತಾರೆ. ಗ್ಯಾರೆಜ್ ರವರು ನೀಡಿರುವ ಅಂತಹ ಕಾಪಿ ಅನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನ ಒಂದು ವರ್ಷ ಗ್ಯಾರೇಜ್ ನಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 31.10.2018 ನಾನು ಇನ್ ವಾಯ್ಸು ರೇಜ್ ಮಾಡಿದ್ದೇನೆ ಎಂದರೆ ಸರಿ. ಅದರಲ್ಲಿ ಬರೆದಿರುವ ವಿಚಾರ ಗೊತ್ತು ಆದರೆ ಈಗ ಓದಿ ಹೇಳಲು ಬರುವುದಿಲ್ಲ. ಬರೆದಿರುವ ಮಾಹಿತಿ ಬಗ್ಗೆ ನನಗೆ ಖುದ್ದು ಮಾಹಿತಿ ಇತಲ್ಲ ಎಂದರೆ ಸರಿಯಲ್ಲ. ಅಪಘಾತವು ದಿನಾಂಕ 23.01.2018ರಂದು ಆಗಿರುತ್ತದೆ ಎಂದರೆ ಸರಿ. ನಾನು ಅಪಘಾತವಾದ 10 ತಿಂಗಳ ನಂತರ ಇನ್ವಾಸ್ ಮತ್ತು ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬಿಲ್ಲುಗಳನ್ನು ಯಾರು ತಯಾರಿಸಿದ್ದಾರೆ ಎಂದು ನನಗೆ

ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಇನ್ವಾಸ್ ಅನ್ನು ಕಂಪನಿಯವರು ತಯಾರಿಸಿರುತ್ತಾರೆ. ನಾನು ಪೇಮೆಂಟ್ ಮಾಡಿದ ಬಗ್ಗೆ ರಶೀದಿಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ, ನಾನು ಅವುಗಳನ್ನು ನನ್ನ ವಿಮೊ ಕಂಪನಿಗೆ ಕೊಟ್ಟು ಕ್ಲೇಮು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಹಣ ಪಡೆಯಲು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಬರಬೇಕಾದ ಕಾನೂನು ಪ್ರಕಾರ ಬರಬೇಕಾದ ಹಣವನ್ನು ಯುನೈಟೆಡ್ ಕಂಪನಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಹನವನ್ನು ರಿಪೇರಿ ಮಾಡಿದವರನ್ನು ಮತ್ತು ರಶೀದಿಗಳನ್ನು ನೀಡಿದ ವ್ಯಕ್ತಿಗಳನ್ನು ಕರೆಯಿಸಿ ಸಾಕ್ಷಿ ನುಡಿಯಲು ಸಾಧ್ಯವಿಲ್ಲ ಏಕೆಂದರೆ ಕಾನ್ ಕಾರ್ಡ್ ಮೋಟಾರ್ ಮುಚ್ಚಿ ಕಿ ಮೋಟಾರ್ ಅಂತ ಮುಂದುವರೆಸಿದ್ದು ಆಗ ಇದ್ದ ವ್ಯಕ್ತಿಗಳು ಈಗ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು